ಮಾಡಲು ಉತ್ತೇಜಿಸುತ್ತದೆ. ಥ್ರಿಲ್ಲರ್ ಕತೆಗೆ ಒಂದು ತಾರ್ಕಿಕ ಅಂತ್ಯ ನೀಡದೆ ಅದನ್ನು ಹುಡುಕಿಕೊಳ್ಳುವಂತೆ ಅಥವಾ ಅಂದಾಜಿಸುವಂತೆ ನಮ್ಮನ್ನು ಅಣಿಗೊಳಿಸುತ್ತದೆ. ಹಾಗಾಗಿ ಕೆಚೆಯ ಥ್ರಿಲ್ಲರ್ ಅಂಶಗಳು ಉತ್ತರಗಳ ಕಂಡುಕೊಳ್ಳದೆಯೇ ಅರ್ಧದಲ್ಲೇ ನಿಂತುಬಿಡುತ್ತವೆ; ಹಾಗೆ ಕಂಡುಕೊಳ್ಳುವ ಜವಾಬ್ದಾರಿಯನ್ನು ನಮ್ಮ ಕಣ್ಣುಗಳಿಗೆ ಹೊರಿಸಿ ನಿರ್ಗಮಿಸುತ್ತವೆ. ವಿಡಿಯೊ ಕ್ಯಾಸೆಟ್ ಕಳುಹಿಸುತ್ತಿದ್ದುದು ಮಜಿದ್‌ನೇ–ಮಜಿದ್–ಜಾರ್ಜ್‌ನಿಗೂ ಇರುವ ಸಂಬಂಧ ಎಂತಹದ್ದು? ಯಾಕಾಗಿ ಜಾರ್ಜ್ ಮಜಿದ್‌ನ ಮೇಲೆ ಆರೋಪ ಹೊರಿಸುತ್ತಾನೆ? ಮಜಿದ್ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವೇನು? ಎಂಬಂತಹ ಹತ್ತಾರು ಪ್ರಶ್ನೆಗಳಿಗೆ ಉತ್ತರವನ್ನು ಕೆಚೆ ನೀಡಿದಂತೆ ಕಂಡರೂ ಅದರ ಹಿಂದಿರುವ 'ಸಬ್ ಟೆಕ್ಸ್ಟ್'ಗಳ ಅರ್ಥೈಸಿಕೊಳ್ಳುವಂತೆ ನಮ್ಮನ್ನದು ಒತ್ತಾಯಿಸುತ್ತದೆ. ಮಜಿದ್‌ನ ತಂದೆ ತಾಯಿ ಸತ್ತಿದ್ದು ಯಾಕಾಗಿ ಎಂಬುದನ್ನು ಹುಡುಕ ಹೊರಟರೆ ನಾವು ಫ್ರೆಂಚ್ ವಸಾಹತುಶಾಹಿ ಇತಿಹಾಸಕ್ಕೆ ಹೋಗಬೇಕಾಗುತ್ತದೆ. ಈ ಇತಿಹಾಸವನ್ನು ಹೇಳಲು ಕೆಚೆ ಎಲ್ಲೂ ಫ್ಲ್ಯಾಶ್‌ಬ್ಯಾಕ್ ತಂತ್ರವನ್ನು ಬಳಸುವುದಿಲ್ಲ. ಜಾರ್ಜ್‌ನ ಮೂರ್ನಾಲ್ಕು ಮಾತುಗಳ ಮೂಲಕ ಮತ್ತು ಕೆಲವು ಹಳೇ ಕಾಲದ 'ಇನ್ವರ್ಷನ್ –ವೈಡ್ ಆಂಗಲ್– ಶಾಟ್‌ಗಳ' ಬಳಸಿಕೊಂಡು ಇತಿಹಾಸ–ವರ್ತಮಾನಗಳನ್ನು ಕೆಡವಿ ಪುನರ್ ರೂಪಿಸುತ್ತದೆ ಕೆಚೆ. ವಸಾಹತುಶಾಹಿ ಇತಿಹಾಸ ಎಂಬ ಮಹಾಕಥನವನ್ನು ಒಂದು ಕುಟುಂಬದೊಳಗೆ ಸಂಭವಿಸುವ ಸಣ್ಣ ಘಟನೆಯೊಂದಿಗೆ ತಳಕು ಹಾಕಿ ಇತಿಹಾಸವನ್ನು ವರ್ತಮಾನಗಳನ್ನು ನಿರ್ವಚಿಸುತ್ತದೆ. ಜೊತೆಗೆ ಕತೆಯಲ್ಲಿ ಎಲ್ಲೂ ಮುಖ್ಯವೆನಿಸದ ಟೀವಿ ನ್ಯೂಸ್ ಮತ್ತೊಂದು 'ಸಬ್ ಟೆಕ್ಸ್ಟ್' ಆಗಿ ಕೆಲಸ ಮಾಡುವುದು ಕೆಚೆಯ ಹೆಚ್ಚುಗಾರಿಕೆ. ಜಾರ್ಜ್–ಆನ್ನಿ ಚರ್ಚಿಸುತ್ತಿರುವಾಗ ಟಿ.ವಿಯಲ್ಲಿ ಬರುತ್ತಿರುವ, (ವರ್ತಮಾನದಲ್ಲಿ ನಡೆಯುತ್ತಿರುವ) ಮಧ್ಯ ಏಷ್ಯಾದ ಯುದ್ಧದ ತುಣುಕುಗಳು ನಮಗೆ ಮತ್ತಿನ್ನೇನನ್ನೊ ಕಲ್ಪಿಸಿಕೊಳ್ಳಲು ಅವಕಾಶ ನೀಡುತ್ತದೆ; ಇದು ಒಂದು ಓದಾದರೆ, ಇಂತಹ ಹತ್ತು ಹಲವು ಓದುಗಳನ್ನು ಹುದುಗಿಸಿಕೊಂಡಿರುವ ಕೆಚೆ ಉತ್ತರಗಳನ್ನು ನೀಡದೆ ಬರೀ ಪ್ರಶ್ನೆಗಳನ್ನು ಕೇಳುತ್ತದೆ. ಆ ವಿಡಿಯೊ ಕ್ಯಾಸೆಟ್‌ಗಳ ಕಳುಹಿಸುತ್ತಿದ್ದವರ್ಯಾರು? ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ.

ವಿಡಿಯೊ ಕ್ಯಾಸೆಟ್‌ಗಳನ್ನು ಮಜಿದ್ ಕಳುಹಿಸುತ್ತಿಲ್ಲ ಎಂಬುದು ನಮಗೆ ಚಿತ್ರದಲ್ಲಿ ಸ್ಪಷ್ಟವಾಗುತ್ತದೆ. ಹಾಗಾದರೆ ಕಳುಹಿಸುತ್ತಿರುವುದು ಯಾರಿರಬಹುದು? ಮಜಿದ್‌ನ ಮಗ? ಜಾರ್ಜ್‌ನ ಮಗ ಪಿಯೊ? ಇಬ್ಬರೂ ಒಟ್ಟಿಗೆ ಸೇರಿ ಕಳುಹಿಸುತ್ತಿರಬಹುದೆ? ಈ ಅನುಮಾನಕ್ಕೆ ಬಲವಾದ ಕಾರಣವನ್ನೂ ಚಿತ್ರ ಒದಗಿಸುತ್ತದೆ. ಚಿತ್ರದ ಕೊನೆಯಲ್ಲಿ ಪಿಯೊ ಮತ್ತು ಮಜಿದ್‌ನ ಮಗ ಇಬ್ಬರೂ ಶಾಲೆಯ ಬಳಿ ಭೇಟಿಯಾಗುತ್ತಾರೆ. ವೈಡ್ ಶಾಟ್ ಆದ ಆ ದೃಶ್ಯದಲ್ಲಿ ಹತ್ತಾರು ಜನರು ಕಾಣಿಸುತ್ತಾರೆ, ಎಲ್ಲೊ ಒಂದು ಮೂಲೆಯಲ್ಲಿ ಪಿಯೊ ಮತ್ತು ಮಜಿದ್‌ನ ಮಗ ಭೇಟಿಯಾಗಿ ಏನನ್ನೊ ಮಾತನಾಡಿಕೊಳ್ಳುತ್ತಾರೆ. (ಆ ಶಾಟ್ ಕೂಡ ವಿಡಿಯೊವೊಂದರ ಅಥವಾ ಸಿ.ಸಿ. ಟೀವಿಯೊಂದರ ದೃಶ್ಯವಾಗಿ ಕಾಣುತ್ತದೆ) ಈ ಇಬ್ಬರೂ ಒಟ್ಟಿಗೆ ಸೇರಿ ವಿಡಿಯೊಗಳನ್ನು ಕಳುಹಿಸುತ್ತಿರಬಹುದೆ? ಆ ಮೂಲಕ ಚಿತ್ರ ಏನನ್ನು ಹೇಳುತ್ತದೆ? ವಸಾಹತ್ತೋತ್ತರ ಫ್ರಾನ್ಸ್‌ನ ಅವಶ್ಯಕತೆಯ ಬಗ್ಗೆ ಸೂಚನೆ ನೀಡುತ್ತದೆಯೇ? ಇವರಿಬ್ಬರ ಹೊರತಾಗಿ ವಿಡಿಯೊ ಕ್ಯಾಸೆಟ್‌ಗಳ ಮತ್ತಿನ್ಯಾರೊ ಕಳುಹಿಸುತ್ತಿರಬಹುದೆ? ಜಾರ್ಜ್‌ನೇ ಕಳುಹಿಸಿಕೊಳ್ಳುತ್ತಾ ಇರಬಹುದೆ? ಅವನ ಸುಪ್ತ ಮನಸ್ಸಿನೊಳಗಿರುವ ಪಾಪಪ್ರಜ್ಞೆಯ ಕಾರಣದಿಂದ ಹೀಗೆ ಸಂಭವಿಸುತ್ತಿರಬಹುದೆ? ಬಾಲ್ಯದಲ್ಲಿ ಎಂದೋ ಘಟಿಸಿದ ಘಟನೆಯಿಂದ ಒಳಗೊಳಗೆ ಬಳಲುತ್ತಿರುವ ಜಾರ್ಜ್ ತಾನೇ ವಿಡಿಯೊಗಳನ್ನು ಕಳುಹಿಸಿಕೊಂಡು ಮಜಿದ್‌ನನ್ನು ಹುಡುಕಿ ಅವನನ್ನು ಆತ್ಮಹತ್ಯೆ ಮಾಡಿಕೊಳ್ಳುವಂತೆ ದೂಡಿ